# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: ದಿನಕರ್ ಜೋಶಿ
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಮನೋಹರ ಆಚಾರ್ಯ

## ಹರಿಲಾಲ ಈಗ ಅಬ್ದುಲ್ಲಾ ಗಾಂಧಿ!

ಚಪ್ಪಾಳೆಗಳ ಭಯಾನಕ ಸದ್ದಿನಿಂದ ಇಡೀ ವಾತಾವರಣ ಪ್ರತಿಧ್ವನಿಸಿತು.

'ಅಲ್ಲಾ ಹೋ ಅಕ್ಬರ್'

'ಪಾಕಿಸ್ತಾನ್ ಜಿಂದಾಬಾದ್'

ಈ ಘೋಷಣೆಗಳು ಮುಗಿಲು ಮುಟ್ಟಿದವು.

'ಹರಿಲಾಲರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಇಂದಿನಿಂದ ಅಬ್ದುಲ್ಲಾ ಗಾಂಧಿಯಾಗಿದ್ದಾರೆ...' ಜಕಾರಿಯಾ ಸಾಹೇಬರು ಚಪ್ಪಾಳೆ ತಟ್ಟುತ್ತಾ ಘೋಷಿಸಿದರು. ವಾತಾವರಣದಲ್ಲಿ ಉತ್ಸಾಹದ ಅಲೆಯ ಸಂಚಾರವಾಯಿತು.

'ಯಾವ ಕೆಲಸವನ್ನು ಹರಿಲಾಲನ ಪರಿವಾರದ ಸದಸ್ಯರು ಮಾಡದಾದರೋ, ಆ ಕೆಲಸವನ್ನು ನಾವು ನಮ್ಮ ಈ ಹೊಸ ಮಿತ್ರರಿಗಾಗಿ ಮಾಡುತ್ತೇವೆ. ನಾವು ಇವರನ್ನು ಹೊಸ ಮಾರ್ಗಕ್ಕೆ ತರುತ್ತೇವೆ. ಇವರಿಗೆ ಹಣದ ಅಗತ್ಯ ಮಾತ್ರವಲ್ಲ, ಪರಿವಾರದ ಅಗತ್ಯವೂ ಇದೆ. ನಾವು ಇವರ ಮದುವೆಯನ್ನೂ ಮಾಡಿಸುತ್ತೇವೆ, ಹಾಗೂ ವಾಸ್ತವಿಕ ಹಾದಿಯಲ್ಲಿ ಸಾಗುವಂತೆ ನೋಡಿಕೊಳ್ಳುತ್ತೇವೆ.' ಜಕಾರಿಯಾ ಸಾಹೇಬರು ತಮ್ಮ ಗೆಲುವಿನ ಮಾತನ್ನು ಮುಗಿಸಿದರು.

'ಅಲ್ಲಾ ಹೋ ಅಕ್ಬರ್' ಘೋಷಣೆಗಳಿಂದ ಮಸೀದಿಯ ಗೋಡೆಗಳು ಕಂಪಿಸಿದವು. ಹರಿಲಾಲ ಅಲ್ಲಾಹ್ ಮಿಯಾಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ತಲೆ ತಗ್ಗಿಸಿ ನಮಸ್ಕರಿಸಿದ.

ಮನೆಯಿಂದ ಹೊರಗೆ ಅತ್ಯಂತ ಬಿಗುವಿನ ವಾತಾವರಣದಲ್ಲಿ ನಿಂತಿದ್ದ ಸಾವಿರಾರು ಜನರಲ್ಲಿ ಶೂನ್ಯ ಆವರಿಸಿತು. ಹಿಂದೂಗಳಿಗೆ ಲಕ್ವಾ ಹೊಡೆದಂತಿತ್ತು. ಇನ್ನೇನು ಚಿಟಿಕೆ ಹೊಡೆಯುತ್ತಲೇ ಪಾಕಿಸ್ತಾನವಾಗುವುದು ಎಂಬ ಉತ್ಸಾಹದಲ್ಲಿ ಮುಸಲ್ಮಾನರಿದ್ದರು. ಸುಮಾರಾಗಿ ಮರೆತು ಹೋಗಿದ್ದ ಹರಿಲಾಲ ದೇಶದೆಲ್ಲೆಡೆಯ ಗಮನವನ್ನು ತನ್ನೆಡೆಗೆ ಆಕರ್ಷಿಸಿದ್ದ.

* * *

ಜುಮಾ ಮಸೀದಿಯಿಂದ ಹೊರಟ ಈ ಘೋಷಣೆ ಬಾಪೂ ಅವರಿಗೆ ತಿಳಿದಾಗ ಬಾಪೂ ಒಂದು ಕ್ಷಣ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಅವರ ಮನಸ್ಸಿನಲ್ಲಿ ತೀವ್ರಗತಿಯಲ್ಲಿ ಮಂಥನವಾಗುತ್ತಿತ್ತು. ನಾಗಪುರದ 'ಡೈಲಿ ನ್ಯೂಸ್' ನಲ್ಲಿ ಹರಿಲಾಲ ಈ ಹಿಂದೆ ನಿವೇದಿಸಿಕೊಂಡಿದ್ದು, ಅದು ಅವನನ್ನು ಈ ಪರಿಸ್ಥಿತಿಗೆ ಕರೆದೊಯ್ಯುವುದೆಂದು ಅವರು ಯೋಚಿಸಿಯೂ ಇರಲಿಲ್ಲ. ಬಾಪೂ ಅವರ ಮುಖದಲ್ಲಿ ಶೂನ್ಯ ಆವರಿಸಿತು. ಅವರು ಕಣ್ಣುಗಳನ್ನು ತೆರೆದಾಗ 'ಮುಸ್ಲಿಮ್ ಅಂಜುಮನ್' ಕಳುಹಿಸಿದ್ದ ತಂತಿಯನ್ನು ಅವರ ಕೈಯಲ್ಲಿಡಲಾಯಿತು. ಬಾಪೂ ತಂತಿಯ ಸಂದೇಶದ ಮೇಲೆ ದೃಷ್ಟಿಯನ್ನು ಹರಿಸಿದರು:

'ನೀವು ಸತ್ಯಶೋಧಕರು. ನಿಮ್ಮ ಮಗನಂತೆಯೇ ಜಗತ್ತಿನ ಸತ್ಯತಮ ಧರ್ಮ ಇಸ್ಲಾಮನ್ನು ಸ್ವೀಕರಿಸುವಿರಾಗಿ ಆಶಿಸುತ್ತೇನೆ.'

### ಮೂವತ್ತನಾಲ್ಕು

ತಂತಿಯ ಸಂದೇಶವನ್ನು ಓದಿ ಬಾಪೂ ಅವರ ಮನಸ್ಸು ಮಗನ ಮತಾಂತರಕ್ಕಿಂತಲೂ ಹೆಚ್ಚು ವೇದನೆಯನ್ನು ಅನುಭವಿಸಿತು. ಅವರ ಹೃದಯಕ್ಕೆ ಯಾರೋ ತೀಕ್ಷ್ಣವಾಗಿ ಹಲ್ಲೆ ಮಾಡಿದಂತೆ... ಹೃದಯದಿಂದ ರಕ್ತ ಒಸರುತ್ತಿರುವಂತೆ.... ಬಾಪೂ ತೀವ್ರ ನೋವಿನಿಂದ ನರಳಿದರು. ನಂತರ ಆ ನೋವಿನಲ್ಲಿಯೂ ಮೌನವನ್ನು ತಾಳಿದರು. ಅವರು ಕ್ಷಣಕಾಲ ಸಂಜ್ಞಾ ಶೂನ್ಯರಾದರು. ಕೋಟ್ಯಂತರ ಜನರ ಪ್ರಶ್ನೆಗಳ ಭಾರದ ನಡುವೆ, ಅವರ ತಲೆಯ ಮೇಲೆ ಮತ್ತೊಂದು ಅಸಹ್ಯ ಭಾರ ಹೇರಿದಂಥ ಅನುಭವವಾಗುತ್ತಿತ್ತು. ತಂತಿ ಸಂದೇಶದಲ್ಲಿದ್ದ ವ್ಯಂಗ್ಯ ತಮ್ಮ ಜೀವನವಿಡಿಯ ತಪಸ್ಸಿನೆಡೆಗೆ ಬೆರಳು ಮಾಡುತ್ತಿದೆ ಎಂದು ಅನ್ನಿಸಿತು. ಸಾಕಷ್ಟು ಹೊತ್ತು ಮನಸ್ಸಿನ ಮಂಥನದಲ್ಲಿ ಮುಳುಗಿದ್ದ ಬಾಪೂ ಕಡೆಗೆ ಮಹಾದೇವ ದೇಸಾಯಿಯವರನ್ನು ಕರೆಸಿದರು.

'ಮಹಾದೇವ! ಹರಿಲಾಲನ ಮತಾಂತರದಿಂದ ಅವರು ಉತ್ಸಾಹಿತರಾಗಿದ್ದಾರೆ, ಅವರ ದಿಕ್ಕೆತಪ್ಪಿದ ಭ್ರಮೆಯ ಬಗ್ಗೆ ಹೇಳುವುದು ನನ್ನ ಕರ್ತವ್ಯವೆಂದು ನಾನು ತಿಳಿಯುತ್ತೇನೆ.' ಬಾಪೂ ಅವರು ಮುಂದುವರೆದು ಹೇಳಿದರು, 'ಹರಿಲಾಲನ ಮತಾಂತರದ ಬಗ್ಗೆ ನನ್ನ ಯಾವುದೇ ಆಕ್ಷೇಪಣೆಯಿಲ್ಲ. ಆದರೆ ಅವರು ತಮ್ಮ ನಡೆಯನ್ನು ಇಸ್ಲಾಮ್‌ಗೆ ಅನುರೂಪವಾಗಿದೆ ಎಂದು ಹೇಳುತ್ತಿದ್ದಾರೆ, ಆದರೆ ಅವರು ಇಸ್ಲಾಮನ್ನು ಅರಿತೇ ಇಲ್ಲ. ಇಂಥ ಧರ್ಮಭ್ರಷ್ಟರಿಗೆ ನನ್ನ ಉತ್ತರವನ್ನು ಬರಿ...'ನವಜೀವನ' ದ ಮುಂದಿನಸಂಚಿಕೆಯಲ್ಲಿ ಇದನ್ನು ಪ್ರಕಟಿಸಲು ವ್ಯವಸ್ಥೆಯನ್ನು ಮಾಡಿ.'

ಮಹಾದೇವರು ಲೇಖನಿ ಹಿಡಿದರು. ಬಾಪೂ ಅವರು ತಮ್ಮ ಹೃದಯದಾಳದಿಂದ ಗುಪ್ತವಾಣಿಯೊಂದು ಹೊರ ಬರುತ್ತಿರುವಂತೆ, ತಮ್ಮ ಅಭಿಪ್ರಾಯವನ್ನು ಬರೆಯಿಸಿದರು:

'ಇದಕ್ಕೆ ನನಗೆ ತುಂಬಾ ದುಃಖವಾಗಿದೆ ಎಂದು ನಾನು ಒಪ್ಪಿಕೊಳ್ಳಬೇಕು. ನನಗಿದರಲ್ಲಿ ಯಾವುದೇ ವಿಧದ ಧರ್ಮ ಭಾವನೆ ಕಾಣ ಬರುವುದಿಲ್ಲ. ಹರಿಲಾಲನ ಧರ್ಮ ತ್ಯಾಗವನ್ನು ಹಿಂದೂ ಧರ್ಮಕ್ಕಾದ ಹಾನಿಯೆಂದು ಒಪ್ಪಲಾಗದು. ಇಸ್ಲಾಮ್ ಧರ್ಮವನ್ನು ಅವನು ಸ್ವೀಕರಿಸಿದ್ದು, ಇದು ಧರ್ಮಕ್ಕೆ ದೌರ್ಬಲ್ಯವನ್ನು ಕೊಂಡಂತಾಗಿದೆ. ಶುದ್ಧ ಮನಸ್ಸಿಲ್ಲದ ಮತಾಂತರ, ಆಸ್ತಿಕರಿಗೆ ದುಃಖದ ಘಟನೆಯೂ ಅಲ್ಲ, ಸಂತಸದ ಘಟನೆಯೂ ಅಲ್ಲ. ನಾನು ನನ್ನ ಅಸಂಖ್ಯ ಮುಸ್ಲಿಮ್ ಮಿತ್ರರಿಗೆ ಬರೆಯುತ್ತಿದ್ದೇನೆ ನೀವು ಹರಿಲಾಲನ ಅತೀತವನ್ನು ಗಮನದಲ್ಲಿಟ್ಟುಕೊಂಡು ಯೋಚಿಸಿ. ಒಂದು ವೇಳೆ ನಿಮಗೆ, ಅವನ ಮತಾಂತರ ಆಧ್ಯಾತ್ಮಿಕವಾಗಿಲ್ಲದಿದ್ದರೆ, ಅವನನ್ನು ಒಪ್ಪಬೇಡಿ. ನೀವು ಅವನನ್ನು